ಕೇಳಿಕೊಂಡಿದ್ದೆ. ಬಸವಣ್ಣನವರು ಹುಟ್ಟಿದಂಥ ಮನೆಯನ್ನು ರಾಷ್ಟ್ರೀಯ ಸ್ಮಾರಕ ಮಾಡುವುದರ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತ ಇಲಾಖಾ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಕ್ರಾಂತಿಯೋಗಿ ಮಹಾತ್ಮ ಬಸವೇಶ್ವರರು ಜನ್ಮ ತಾಳಿದ ಬಸವನ ಬಾಗೇವಾಡಿಯಲ್ಲಿರುವ ಮನೆಯನ್ನು ಸರ್ಕಾರ ವಶಪಡಿಸಿಕೊಳ್ಳಲು ಹಾಗೂ ಅದನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡುವ ಬಗ್ಗೆ. ಈಗ ಅಲ್ಲಿ ನೆಲೆಸಿರುವವರಿಗೆ ವಸತಿ, ನಿವೇಶನ ಮುಂತಾದ ಪರಿಹಾರ ನೀಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸವಿವರವಾದ ವರದಿಯನ್ನು ಕೂಡಲೇ ಪಡೆದು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಅಲ್ಲಿರತಕ್ಕಂಥ ಕೆಲವು ಸ್ಥಳಗಳನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಅದಕ್ಕೆ ನಿಗದಿಪಡಿಸಿರತಕ್ಕಂಥ ಹಣವನ್ನು ಕೊಟ್ಟು ಜೀರ್ಣೋದ್ಧಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಸಿಂಧನೂರು ಮಾರಾಟ ಸಹಕಾರ ಸಂಘವನ್ನು ಗುತ್ತಿಗೆಗೆ ತೆಗೆದುಕೊಂಡಿರುವವರಿಂದ ಆಗಿರುವ ಹಾನಿ.

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಅಧ್ಯಕ್ಷರೇ, ಸಿಂಧನೂರಿನಲ್ಲಿರತಕ್ಕಂಥ ಒಕ್ಕಲುತನ ಒತ್ತುವಳಿ ಮಾರಾಟ ಸಹಕಾರ ಸಂಘದಲ್ಲಿ ಜಿನ್ನಿಂಗ್ ಮತ್ತು ಪ್ರೆಸಿಂಗ್ ಯೂನಿಟ್‌ಗಳನ್ನು 3 ವರ್ಷ ಗುತ್ತಿಗೆಯ ಮೇಲೆ ಕೊಡಲಾಗಿದೆ ಎನ್ನುವುದನ್ನು ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಬಂದಿರತಕ್ಕಂಥ ವಿಚಾರವೇನೆಂದರೆ ಸಂಬಂಧಪಟ್ಟ ಗುತ್ತಿಗೆದಾರರು ಒಂದು ವರ್ಷ ನಡೆಸಿದ ನಂತರ, ಮುಂದಿನ 2 ವರ್ಷ ನಮ್ಮಿಂದ ನಡೆಸಲು ಆಗುವುದಿಲ್ಲ ಎನ್ನುವ ಮಾತನ್ನು ಲಿಖಿತ ಮೂಲಕವಾಗಿ ಸಂಬಂಧಪಟ್ಟಂಥ ಸಂಘದ ಪದಾಧಿಕಾರಿಗಳಿಗೆ ಕೊಟ್ಟಿದ್ದಾರೆ. ಅದರಿಂದಾಗಿ ಸುಮಾರು 13 ಲಕ್ಷ ರೂಪಾಯಿ ಆ ಸಂಘಕ್ಕೆ ಹಾನಿಯಾಗುತ್ತದೆ. ಇದಕ್ಕೆ ಸಂಬಂಧಪಟ್ಟವರ ಮೇಲೆ ತಾವು ಏನು ಕ್ರಮ ತೆಗೆದುಕೊಳುತ್ತೀರಿ ಮತ್ತು ಸಂಘಕ್ಕೆ ಹಣ ಹಾನಿಯಾಗದಂತೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥಾದ್ದಕ್ಕೆ ಸಚಿವರು ಉತ್ತರ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸಿಂಧನೂರು ಮಾರಾಟ ಸಂಘದ ಜಿನ್ನಿಂಗ್ ಫ್ಯಾಕ್ಟರಿಯನ್ನು ಒಬ್ಬರಿಗೆ ಮೂರು ವರ್ಷದ ಕರಾರಿನ ಮೇಲೆ ಕೊಟ್ಟಿದ್ದೆವು. ಅವರು ಯಾರು ಎನುವುದನ್ನು ಈಗಾಗಲೇ ಉತ್ತರದಲ್ಲಿ ತಿಳಿಸಲಾಗಿದೆ. ಅವರು ಒಂದು ವರ್ಷದ ರೊಕ್ಕವನ್ನು ಅಡ್ವಾನ್ಸ್‌ಆಗಿ ತುಂಬಿದ್ದಾರೆ. ಪ್ರತವರ್ಷ ಅವರು ಅಡ್ವಾನ್ಸ್ ತುಂಬಬೇಕು ಎನ್ನುವ ಕರಾರು ಇತ್ತು. ಆದರೆ ಈಗ ಅವರು ತಮ್ಮಿಂದ ನೆಡೆಸಲು ಆಗುವುದಿಲ್ಲ ಎಂದು ತಿಳಿಸಿದ್ದಾರೆ. ಅದರೂ ಕೂಡ ಮೂರು ವರ್ಷದ ಕರಾರಿನ ಪ್ರಕಾರ ಅವರೇ ಅದನ್ನು ನಡೆಸಬೇಕಾಗುತ್ತದೆ. ಅವರ ಆಸ್ತಿಯನ್ನು ವಶಪಡಿಸಿಕೊಂಡು ಅವರ ಮೇಲೆ ಕ್ರಮ ತೆಗೆದುಕೊಂಡು ಸಂಘಕ್ಕೆ ರೊಕ್ಕವನ್ನು ತುಂಬಿ ಕೊಡಲು ನಾವು ವ್ಯವಸ್ಥೆ ಮಾಡುತ್ತೇವೆ.